ಬೆಂಗಳೂರಿನ ಲಾಲ್ ಬಾಗ್ ಉದ್ಯಾನವನ

329(3052) ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನ ಸುಪ್ರಸಿದ್ದ ಲಾಲ್‌ಬಾಗ್ ಉದ್ಯಾನವನ ಈಗ ಯಾವ ಯಾವ ಇಲಾಖೆ ಉಸ್ತುವಾರಿಯಲ್ಲಿದೆ:

ಆ) ಆ ಉದ್ಯಾನವನದ ಉಸ್ತುವಾರಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಕೊಡಲು ಸರ್ಕಾರ ನಿಶ್ಚಯಿಸಿದೆಯೆ:

ಇ) ನಿಶ್ಚಯಿಸಿದ್ದರೆ ಈ ನಿರ್ಧಾರಕ್ಕೆ ಕಾರಣಗಳೇನು

ಈ) ಕಳೆದ 3 ವರ್ಷಗಳಿಂದ ಲಾಲ್‌ಬಾಗ್ ಅಭಿವೃದ್ಧಿಗಾಗಿ ಪ್ರತಿ ವರ್ಷ ಖರ್ಚು ಮಾಡಿರುವ ಹಣವೆಷ್ಟು: ಪ್ರವೇಶ ಶುಲ್ಕದ ಮೂಲಕ ಸಂಗ್ರಹವಾದ ಹಣವೆಷ್ಟು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) ತೋಟಗಾರಿಕೆ ಇಲಾಖೆಯ ಉಸ್ತುವಾರಿಯಲ್ಲಿದೆ.

ಆ) ಇಲ್ಲ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬೆಂಗಳೂರು ಅಜೆಂಡಾ ಟಾಸ್ಕ್ ಫೋರ್ಸ್ ಸಹಯೋಗದೊಂದಿಗೆ ತನ್ನಲ್ಲಿರುವ ಸಂಪನ್ಮೂಲ ಬಳಸಿಕೊಂಡು ಲಾಲ್‌ಬಾಗ್ ಉದ್ಯಾನವನವನ್ನು ಭೌತಿಕವಾಗಿ ಹಾಗೂ ಸ್ಥಾನಿಕವಾಗಿ ಅಭಿವೃದ್ಧಿ ಪಡಿಸಲು ಆದೇಶಿಸಿದೆ.

ಇ) ಉದ್ಭವಿಸುವುದಿಲ್ಲ.

ಈ)

ಲಕ್ಷ ರೂ.ಗಳಲ್ಲಿ

ವರ್ಷ	ಯೋಜನಾಂಶ ಅನುದಾನದಿಂದ ಖರ್ಚು ಮಾಡಿದ ಹಣ	ಬೆಂಗಳೂರು ಗಾರ್ಡನ್ ಟ್ರಸ್ಟ್‌ನಿಂದ ಖರ್ಚು ಮಾಡಿದ ಹಣ	ಒಟ್ಟು	ಪ್ರವೇಶ ಶುಲ್ಕದಿಂದ ಸಂಗ್ರಹವಾದ ಹಣ
2000–01	22.50	17.72	40.22	46.23
2001–02	29.50	18.79	48.29	41.50
2002–03	55.71	33.05	88.76	44.47
ಒಟ್ಟು	**107.71**	**69.56**	**177.27**	**132.20**

ಕಳೆದ ಮೂರು ವರ್ಷಗಳಲ್ಲಿ ಲಾಲ್‌ಬಾಗ್ ಪ್ರವೇಶ ಶುಲ್ಕದಿಂದ ರೂ. 132.2 ಲಕ್ಷ ಸಂಗ್ರಹವಾಗಿರುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೆ, ಸುಮಾರು ಒಂದು ತಿಂಗಳ ಹಿಂದೆ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಲಾಲ್‌ಬಾಗ್‌ಗೆ ಹೋದಾಗ ನಾವು ಲಾಲ್‌ಬಾಗನ್ನು ಬಿಡಿಎಗೆ ಉಸ್ತುವಾರಿಗಾಗಿ ವಹಿಸಿಕೊಡುತ್ತೇವೆಂದು ಒಂದು ಹೇಳಿಕೆ ಕೊಟ್ಟಿದ್ದರು. ಅದಾದ ನಂತರ

ಒಂದು ವಾರದ ನಂತರ ಲಾಲ್‌ಬಾಗ್ ಮತ್ತು ಕಬ್ಬನ್ ಪಾರ್ಕ್ ಎರಡನ್ನೂ ನಾವು ಬಿಡಿಎಗೆ ಒಂದು ಗವರ್ನಮೆಂಟ್ ಆರ್ಡರ್ ಮುಖಾಂತರ ವಹಿಸಿಕೊಡುತ್ತೇವೆಂದು ಹೇಳಿ ರಾಜ್ಯದ ಮುಖ್ಯ ಮಂತ್ರಿಗಳು ಹೇಳಿಕೆ ಕೊಟ್ಟಿದ್ದರು. ಅದರ ಹಿನ್ನೆಲೆಯಲ್ಲಿ ನಾನು ಈ ಪ್ರಶ್ನೆಯನ್ನು ಕೇಳಿದ್ದೇನೆ. ಈಗ ಅವರು ಹೇಳುತ್ತಾರೆ. ನಾವು ಬಿಎಟಿಎಫ್ ಸಹಯೋಗದೊಂದಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ತನ್ನಲ್ಲಿರುವ ಸಂಪನ್ಮೂಲ ಬಳಸಿಕೊಂಡು ಲಾಲ್‌ಬಾಗ್ ಉದ್ಯಾನವನವನ್ನು ಭೌತಿಕವಾಗಿ ಮತ್ತು ಸ್ಥಾನಿಕವಾಗಿ ಅಭಿವೃದ್ಧಿಪಡಿಸಲು ಆದೇಶಿಸಿದೆ ಎಂದು ತಿಳಿಸಿದ್ದಾರೆ. ಅದು ಇಂಗ್ಲೀಷ್‌ನಲ್ಲಿ ಏನು ಇದೆಯೋ ಗೊತ್ತಿಲ್ಲ. ನನ್ನ ಪ್ರಶ್ನೆ ಏನು ಎಂದರೆ ಬಿಡಿಎಗೆ ತೋಟಗಾರಿಕೆ ಇಲಾಖೆಗೆ ಏನು ಸಂಬಂಧ? ತೋಟಗಾರಿಕೆಯಲ್ಲಿ ಈ ರೀತಿ ಭೌತಿಕವಾಗಿ ಸ್ಥಾನಿಕವಾಗಿ ಅಭಿವೃದ್ಧಿಪಡಿಸಲು ಬಿಡಿಎಗೆ ಇರುವ ಪರಿಣಿತಿ ಏನು? ಬೆಂಗಳೂರಿನಲ್ಲಿ ಬಿಡಿಎ ಇದುವರೆಗೆ ಎಷ್ಟು ತೋಟಗಳನ್ನು ಅಭಿವೃದ್ಧಿಗೊಳಿಸಿದೆ.

ಶ್ರೀ ಎಂ. ಶಿವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರತಕ್ಕದ್ದು ಬಿಡಿಎಗೆ ಹಸ್ತಾಂತರ ಮಾಡಿದ್ದೀರಾ ಎಂದು ಪ್ರಶ್ನೆ ಕೇಳಿರುವುದು. ಬಿಡಿಎಗೆ ಹಸ್ತಾಂತರ ಮಾಡುವಂತಹ ಸಂದರ್ಭ ಇಲ್ಲಿ ಉದ್ಭವ ಆಗುವುದಿಲ್ಲ. ಅದನ್ನು ನಮ್ಮ ಉತ್ತರದಲ್ಲಿ ಅವರಿಗೆ ಒದಗಿಸಿಕೊಟ್ಟಿದ್ದೇವೆ. ಲಾಲ್‌ಬಾಗ್ ಸುಮಾರು 200 ಎಕರೆ ಪ್ರದೇಶದಲ್ಲಿ ಇರತಕ್ಕಂಥದ್ದು. ಇದೊಂದು ಬಟಾನಿಕಲ್ ಗಾರ್ಡನ್. ಇಲ್ಲಿ ಸುಮಾರು 1853 ವಿವಿಧ ಗಿಡಗಳೂ ಸಹ ಇರತಕ್ಕಂಥದ್ದು. ಇಲ್ಲಿ ಈಗಾಗಲೇ ಸುಮಾರು ದಿನನಿತ್ಯ ವಾಕ್ ಮಾಡತಕ್ಕವರು ಐದು ಸಾವಿರ ಮಂದಿ ಬರುತ್ತಾರೆ ಎನ್ನತಕ್ಕ ವರದಿ ಇದೆ. ಜೊತೆಗೆ ಸುಮಾರು ಐದರಿಂದ ಹತ್ತು ಸಾವಿರ ಪ್ರವಾಸಿಗರು ದಿನನಿತ್ಯ ಅಲ್ಲಿ ಬಂದು ಹೋಗತಕ್ಕದ್ದೂ ಕೂಡ ಇರತಕ್ಕದ್ದು. ಬೆಂಗಳೂರು ನಗರದ ಜನಸಂಖ್ಯೆಗೆ ನೋಡಿದರೆ, ಪರಿಸರದ ದೃಷ್ಟಿಯಿಂದ ಇದನ್ನು ಅತ್ಯಂತ ಅವಶ್ಯಕವಾಗಿ ಕಾಪಾಡಬೇಕಾಗಿರತಕ್ಕಂಥದ್ದು. ಇಷ್ಟು ಮಹತ್ವವಾದಂತಹ ಇವೆರಡೂ ಪಾರ್ಕ್‌ಗಳನ್ನು ಕೂಡ ನಾವು ಅಭಿವೃದ್ಧಿಪಡಿಸಬೇಕೆಂದು ಮಾಡುವಾಗ ಸುಮಾರು ಕಳೆದ ಮೂರು ವರ್ಷಗಳಿಂದ ಕೂಡ ತಾವು ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎಂದು ಪ್ರಶ್ನೆ ಕೇಳಿದ್ದೀರಿ. ನಾವು ಸುಮಾರು 177 ಲಕ್ಷ ರೂಪಾಯಿಗಳಷ್ಟು ಹಣ ಖರ್ಚು ಮಾಡಿದ್ದೇವೆ. ಇದಕ್ಕೋಸ್ಕರ ಒಂದು ಗಾರ್ಡನ್ ಟ್ರಸ್ಟ್ ಎಂದು ಕೂಡ ಇದೆ. ನಮ್ಮ ತೋಟಗಾರಿಕಾ ಇಲಾಖೆಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ನಮ್ಮ ಅನೇಕ ಅಧಿಕಾರಿಗಳನ್ನು ಒಳಗೊಂಡಂತಹ ಒಂದು ಸಮಿತಿ ಕೂಡ ಇದೆ. ಇದು ಅದರ ಅಭಿವೃದ್ಧಿ ಕಾರ್ಯಗಳನ್ನು ಆಗಿಂದಾಗ್ಗೆ ಪರಿಶೀಲನೆ ಕೂಡ ಮಾಡುತ್ತಿದೆ. ಇಷ್ಟೆಲ್ಲವನ್ನೂ ಮಾಡುವಾಗ ನಾವು ಇಲಾಖೆಯ ವತಿಯಿಂದ ಇದನ್ನು ಅಭಿವೃದ್ಧಿಪಡಿಸಬೇಕು ಎಂದು ಹೇಳಿ ಒಂದು ಅಂದಾಜನ್ನು ಕೂಡ ತಯಾರು ಮಾಡಿಕೊಂಡಿದ್ದೇನೆ. ಸುಮಾರು ಹತ್ತಾರು ಕೋಟಿ ರೂಪಾಯಿಗಳು ಆಗತಕ್ಕಂಥಹ ಒಂದು ಅಂದಾಜು ಇದೆ. ಇಷ್ಟು ಹಣವನ್ನೂ ತೊಡಗಿಸಿ ನಾವು ಅದನ್ನು ಅಭಿವೃದ್ಧಿಪಡಿಬೇಕು ಎಂದು ಹೇಳಿದರೆ ಇಲಾಖೆ ವತಿಯಿಂದ ಸಾಕಷ್ಟು ಹಣಕಾಸಿನ ಸಂಪನ್ಮೂಲತೆ ಇಲ್ಲ. ಈ ದೃಷ್ಟಿಯಿಂದ ನಾವು ಆಗಿಂದಾಗ್ಗೆ ಚರ್ಚೆ ಮಾಡಿದ್ದೇವೆ. ನಾನೂ ಕೂಡ ಸ್ವತಃ ನನ್ನ ಇಲಾಖೆಯ ಅಧಿಕಾರಿಗಳ ಜೊತೆ ಖುದ್ದಾಗಿಯೇ ಲಾಲ್‌ಬಾಗ್‌ನ ಪ್ರದಕ್ಷಿಣೆ ಮಾಡಿ ಏನು ಅಭಿವೃದ್ಧಿ ಪಡಿಸಬಹುದು ಎಂದು ಹೇಳಿ ಚಿಂತನೆ ಕೂಡ ನಡೆಸಿದ್ದೇವೆ. ಆ ಸಂದರ್ಭದಲ್ಲಿ ಅಲ್ಲಿನ ಅಸೋಸಿಯೇಷನ್‌ನವರು ಮತ್ತು ಮಾನ್ಯ ಸುಬ್ಬಾರೆಡ್ಡಿಯವರೂ ಕೂಡ ಅವರ ಜೊತೆಯಲ್ಲಿ ಇದ್ದದ್ದನ್ನು ನಾನು ಕಂಡಿದ್ದೇನೆ. ಅನೇಕ ಅಭಿಪ್ರಾಯಗಳು ಇದೆ. ಅಲ್ಲಿನ ಶಾಸಕರಾಗಿರುವ ಹಾಗೂ

ಸಚಿವರಾದ ಮಾನ್ಯ ರಾಮಲಿಂಗಾ ರೆಡ್ಡಿಯವರೂ ಕೂಡ ಅನೇಕ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಇಷ್ಟು ಆದಾಗಿಯೂ ಕೂಡ ನಾವು ಸಾಕಷ್ಟು ಹಣಕಾಸನ್ನು ತೊಡಗಿಸುವುದಕ್ಕೆ ಸಾಧ್ಯತೆ ಇಲ್ಲ ಎನ್ನತಕ್ಕ ಒಂದು ದೃಷ್ಟಿ ಇರುವಾಗ ಮಾನ್ಯ ಮುಖ್ಯಮಂತ್ರಿಗಳು ಆ ಒಂದು ದಿವಸ ಭೇಟಿ ಕೊಟ್ಟು ಇದನ್ನು ಅಭಿವೃದ್ಧಿ ಹೇಗೆ ಮಾಡಬಹುದು ಎಂಬ ತಕ್ಕ ಚಿಂತನೆ ನಡೆಸಿರತಕ್ಕದ್ದು ನಿಜಕ್ಕೂ ಕೂಡ ಒಂದು ಮೆಚ್ಚತಕ್ಕ ಕಾರ್ಯ. ಸ್ವತಃ ಮನ್ಯ ಮುಖ್ಯಮಂತ್ರಿಗಳು ಭೇಟಿ ಕೊಟ್ಟು ಇದನ್ನು ಅಭಿವೃದ್ಧಿಪಡಿದಬೇಕು ಎಂದು ಹೇಳಿ ಚಿಂತನೆ ನಡೆಸಿರತಕ್ಕದ್ದು ಮೆಚ್ಚತಕ್ಕದ್ದು. ಹಾಗಿರುವಾಗ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಂತಹ ಸಂದರ್ಭದಲ್ಲಿ ಇದಕ್ಕೆ ಒಂದು ನಮ್ಮ ಬಿಎಟಿಎಫ್ ಛೇರ್ಮನ್ ಇದ್ದಾರೆ ಅವರ ಒಂದು ಸಲಹೆ ಮೇರೆಗೆ ಇದನ್ನು ಅಭಿವೃದ್ಧಿಪಡಿಸಬಹುದು ಎನ್ನತಕ್ಕ ದೃಷ್ಟಿಯಿಂದ ಬಿಡಿಎನವರ ಸಹಕಾರ ಪಡೆದುಕೊಂಡು, ಅವರಿಂದ ಸಂಪನ್ಮೂಲಗಳನ್ನು ಪಡೆದುಕೊಂಡು ಏನು ಅಲ್ಲಿ ಒಂದು ಅಭಿವೃದ್ಧಿಪಡಿಸಬೇಕು ಎನ್ನತಕ್ಕ ದೃಷ್ಟಿಯಿಂದ ಒಂದು ಸಮಿತಿಯನ್ನು ಕೂಡ ರಚನೆ ಮಾಡಿದ್ದರು. ಸರ್ಕಾರ ಈಗಾಗಲೇ ಒಂದು ಆದೇಶ ಹೊರಡಿಸಿದೆ. ಸಮಿತಿಯನ್ನು ರಚನೆ ಮಾಡಿ ಆದೇಶ ಹೊರಡಿಸಿದೆ. ಉದ್ದೇಶ ಏನು ಅಂದರೆ ತಮ್ಮ ಅಭಿಪ್ರಾಯದಲ್ಲಿ ಇರತಕ್ಕಂಥ, ಸಾರ್ವಜನಿಕ ದೃಷ್ಟಿಯಲ್ಲಿರತಕ್ಕಂಥಹದನ್ನೂ ಕೂಡ ಬಿಡಿಎಗೆ ಹಸ್ತಾಂತರ ಮಾಡುತ್ತಾರೆ ಎಂಬತಕ್ಕ ಮನಸ್ಸು ತಮ್ಮಲ್ಲಿ ಇರತಕ್ಕದ್ದು. ಆದರೆ ಇದು ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲೇ ಇರುತ್ತದೆ. ಇದನ್ನು ಹಸ್ತಾಂತರ ಮಾಡತಕ್ಕದ್ದು ಇಲ್ಲ. ಆದರೆ ಸಂಪೂರ್ಣ ಅಭಿವೃದ್ಧಿ ಮಾಡುವ ದೃಷ್ಟಿಯಿಂದ ಬಿಡಿಎನವರು ಎಲ್ಲಾ ನೆರವನ್ನು ಕೂಡ ನೀಡತಕ್ಕ ಕೆಲಸವನ್ನು ಮಾಡುತ್ತಾರೆ. ಉದ್ದೇಶ ಕೂಡ ಇದೆ. ಬರತಕ್ಕ ಜೂನ್ 30ರೊಳಗಡೆ ಇದನ್ನು ಸಂಪೂರ್ಣ ಅಭಿವೃದ್ಧಿಪಡಿಸಬೇಕು ಎನ್ನತಕ್ಕ ಒಂದು ಉದ್ದೇಶ ಇರುವುದರಿಂದ ತಮ್ಮ ಅನುಮಾನಕ್ಕೆ ಆಸ್ಪದ ಇಲ್ಲ ಎನ್ನತಕ್ಕದ್ದು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ.

12.50 ಪಿ.ಎಂ.

ಶ್ರೀ ಎಸ್. ಸುರೇಶ್‌ಕುಮಾರ್ : "సర్వ రోగానికి సారాయి మందు" ಎಂದು ತೆಲುಗಿನಲ್ಲಿ ಗಾದೆ ಇರುವಂತೆ ಬೆಂಗಳೂರಿನಲ್ಲಿ ಏನಾಗಿದೆಯೆಂದರೆ, ಸಕಲ ಇಲಾಖೆಗಳಿಗೂ ಬಿಡಿಎ ಮದ್ದು ಎಂಬಂತಾಗಿದೆ. ತೋಟಗಾರಿಕೆ ಇಲಾಖೆಗೆ ಬೇಕಾಗಿರುವುದು ಹಣ, ಆ ಹಣವನ್ನು ಬೇಕಿದ್ದರೆ ಬಿಡಿಎಯಿಂದ ಟ್ರಾನ್ಸ್‌ಫರ್ ಮಾಡಿಸಿಕೊಳ್ಳಿ. ನನಗೆ ಗೊತ್ತಿರುವ ಪ್ರಕಾರ, ಲಾಲ್‌ಬಾಗ್‌ಗೆ ಅದರದ್ದೇ ಆದ ಇತಿಹಾಸವಿದೆ. ಲಾಲ್‌ಬಾಗ್ ಅನ್ನು ಸ್ಥಾಪಿಸಲು ಕಾರಣಕರ್ತರಾದವರು ದಿವಂಗತರ ಮರಿಗೌಡರು ತಾವು ಹೇಳಿರುವಂತೆ ಲಾಲ್‌ಬಾಗ್ ಅದೊಂದು ಪಾರ್ಕ್ ಅಲ್ಲ. It is a Botonical Garden. It is a Research Garden. Incidentally, it is recreation garden. ತೋಟಗಾರಿಕೆ ಉಳಿಸಬೇಕು ಮತ್ತು ಚೆನ್ನಾಗಿ ಬೆಳೆಸಬೇಕೆಂಬ ಬಗ್ಗೆ ತೋಟಗಾರಿಕೆ ವಿಷಯದಲ್ಲಿ ಪಿಹೆಚ್‌ಡಿ ಮಾಡಲು ಸಾಕಷ್ಟು ಮಂದಿ ಅಲ್ಲಿ ಶ್ರಮಿಸುತ್ತಿದ್ದಾರೆ. ಪರಿಸ್ಥಿತಿ ಹೀಗಿರುವಾಗ, ಕನ್ನಡ ಸಾಹಿತ್ಯ ಪರಿಷತ್ ಕಟ್ಟಡ ಕಟ್ಟಬೇಕು. ಬಿಡಿಎಗೆ ಕೊಡುವುದು ಕಬ್ಬನ್ ಪಾರ್ಕ್ ಅಭಿವೃದ್ಧಿಪಡಿಸಬೇಕು. ಬಿಡಿಎಗೆ ಕೊಡುವುದು ಲಾಲ್‌ಬಾಗ್ ಅಭಿವೃದ್ಧಿ ಪಡಿಸಬೇಕು. ಬಿಡಿಎಗೆ ಕೊಡುವುದು ಹೀಗಾದರೆ ನನಗನ್ನಿಸುತ್ತದೆ. ಒಂದು ದಿವಸ ವಿಧಾನಸೌಧದ ಮೂರನೇ ಮಹಡಿಯ ನಿರ್ವಹಣೆಯನ್ನೂ ಕೂಡ ಬಿಡಿಎಗೆ ಕೊಡುವಂತಾಗುತ್ತದೆ! ಈ ದೃಷ್ಟಿಯಲ್ಲಿ ನಾನು ಹೇಳುವುದೇನೆಂದರೆ, ತೋಟಗಾರಿಕೆ ಇಲಾಖೆಗೆ ಹಣಕಾಸಿನ ತೊಂದರೆಯಿದ್ದಲ್ಲಿ ಬಿಡಿಎ ಹತ್ತಿರ ಹೆಚ್ಚು ಹಣ ಇದ್ದರೆ, ನೀವು ಅದನ್ನೇ ವರ್ಲ್ಡ್ ಬ್ಯಾಂಕ್

ಎಂದು ಟ್ರೀಟ್ ಮಾಡಿ ಅವರಿಂದ ಹಣ ತಂದು ತೋಟಗಾರಿಕೆ ಇಲಾಖೆ ನೇತೃತ್ವದಲ್ಲಿ ಅಥವಾ ಇನ್ಯಾರಾದರೂ ಮಾರ್ಗದರ್ಶನದಲ್ಲಿ ಲಾಲ್‌ಬಾಗ್ ಮತ್ತು ಕಬ್ಬನ್ ಪಾರ್ಕ್ ಅಭಿವೃದ್ಧಿಪಡಿಸಿ ಉಳಿಸಿಕೊಂಡರೆ ತೋಟಗಾರಿಕೆ ಇಲಾಖೆಗೂ ಮರ್ಯಾದೆ ಇರುತ್ತದೆ ಹಾಗೂ ಲಾಲ್‌ಬಾಗ್ ಮತ್ತು ಕಬ್ಬನ್ ಪಾರ್ಕ್‌ಗೆ ತನ್ನದೇ ಆದ ಘನತೆ ಉಳಿಯುತ್ತದೆ. ಆ ಕಾರಣಕ್ಕಾಗಿ ಏಲ್ಲಾದಕ್ಕೂ ಬಿಡಿಎ ಎನ್ನುವುದು ಬಿಟ್ಟುಬಿಡಿ. ಬಿಡಿಎಗೆ ನಿರ್ವಹಿಸಲು ಬೇಕಾದಷ್ಟು ಕೆಲಸ–ಕಾರ್ಯಗಳಿವೆ. ಬಿಡಿಎನವರು ಅಭಿವೃದ್ಧಿಪಸಿರುವ ಅವರದೇ ಬಡಾವಣೆಯಲ್ಲಿರುವ ಗಾರ್ಡನ್‌ಗಳನ್ನು ಸರಿಯಾಗಿ ಮೇನ್‌ಟೇನ್ ಮಾಡುವುದಿಲ್ಲವೆಂಬುದು ನಮಗೆ ಗೊತ್ತಿದೆ. ಇನ್ನು ಲಾಲ್ ಬಾಗ್ ಅನ್ನು ಅವರಿಗೆ ವಹಿಸಿಕೊಟ್ಟರೆ ಅಭಿವೃದ್ಧಿಯಾಗುತ್ತದೆಯೇ? ಅದಕ್ಕೋಸ್ಕರ ತೋಟಗಾರಿಕೆ ಇಲಾಖೆ ಮುಖಾಂತರ ಬಿಡಿಎಯಿಂದ ಹಣ ಪಡೆದು ಲಾಲ್‌ಬಾಗ್ ಅಭಿವೃದ್ಧಿಗೆ ಮುಂದಾಗುವ ನಿಟ್ಟಿನಲ್ಲಿ ದಯವಿಟ್ಟು ಮಾರ್ಗದರ್ಶನ ನೀಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಮಾನ್ಯ ಸದಸ್ಯರಾದ ಸುರೇಶ್ ಕುಮಾರ್ ಅವರ ಪ್ರಶ್ನೆಗೆ ಉತ್ತರ ಕೊಡಲಿಲ್ಲ. ಇದು ಹಸ್ತಾಂತರದ ಪ್ರಶ್ನೆಯಾಗಿದೆ. ಲಾಲ್‌ಬಾಗ್ ಅನ್ನು ಬಿಡಿಎಗೆ ವಹಿಸಿಕೊಡುವ ವಿಷಯ. ಅದನ್ನು ತೋಟಗಾರಿಕೆ ಇಲಾಖೆಯಲ್ಲೇ ಉಳಿಸಿಕೊಳ್ಳುವ ಬಗ್ಗೆ ತಾವು ಸ್ಪಷ್ಟೀಕರಣ ನೀಡಲಿಲ್ಲ. ಲಾಲ್‌ಬಾಗ್‌ನ ಸಂಪೂರ್ಣ ನಿರ್ವಹಣೆ ತೋಟಗಾರಿಕೆ ಇಲಾಖೆ ವ್ಯಾಪ್ತಿಗೆ ಬರುತ್ತದೆ. ಲಾಲ್‌ಬಾಗ್ ನಿರ್ವಹಣೆಯನ್ನು ಬಿಡಿಎಗೆ ವಹಿಸಿಕೊಡುವುದರಲ್ಲಿ ತಪ್ಪೇನೂ ಇಲ್ಲವೆಂದು ಡ್ಯುಯಲ್ ಕಂಟ್ರೋಲ್ ತರಹ ಇಲ್ಲಿ ಹೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಲಾಲ್‌ಬಾಗ್‌ಗೆ ದಿಢೀರ್ ಭೇಟಿ ಕೊಟ್ಟಿದ್ದು ನಿಜ. ಅಲ್ಲಿನ ಗಾಜಿನ ಮನೆ ವೀಕ್ಷಿಸಿ ದುರಸ್ತಿ ಮಾಡಬೇಕಾಗಿದೆಯೆಂದು ಹೇಳಿದ್ದಾರೆ. ಗಾಜಿನ ಮನೆಯಲ್ಲಿ ಫಲಪುಷ್ಪ ಪ್ರದರ್ಶನ ಏರ್ಪಡಿಸುವುದರಿಂದ ಅದನ್ನು ವೀಕ್ಷಿಸಲು ಬರುವವರಿಗೆ ಎಷ್ಟು ಪ್ರವೇಶ ಶುಲ್ಕ ವಿಧಿಸುತ್ತೀರಿ? ಲಾಲ್‌ಬಾಗ್‌ಗೆ ಪ್ರತಿನಿತ್ಯ ವಾಕಿಂಗ್ ಮಾಡಲು ಬರುವವರಿಗೆ ಎಷ್ಟು ಶುಲ್ಕ ವಿಧಿಸುತ್ತೀರಿ? ಅಲ್ಲಿಗೆ ಪ್ರತಿ ದಿವಸ ಹತ್ತು ಸಾವಿರ ಜನರು ಬರುವುದರಿಂದ ಪ್ರವೇಶ ಶುಲ್ಕ ವಿಧಿಸಿ ಅದನ್ನು ಸಂಗ್ರಹಿಸಲಾಗುತ್ತಿದೆಯೇ? ಇದೆಲ್ಲವನ್ನೂ ತಾವು ಹೇಳಬೇಕಾಗುತ್ತದೆ. ಪ್ರತಿ ದಿನ ಬೆಳಿಗ್ಗೆ ಸುಮಾರು ಐದು ಸಾವಿರ ನಗರದ ನಾಗರಿಕರು ಲಾಲ್‌ಬಾಗ್‌ಗೆ ವಾಕಿಂಗ್ ಬಂದರೆ ಹೊರಗಡೆಯಿಂದ ಹತ್ತು ಸಾವಿರದಷ್ಟು ಪ್ರವಾಸಿಗರು ಬರುತ್ತಿದ್ದಾರೆಂದು ತಿಳಿಸಿದಿರಿ. ಇವರಿಗೆ ತಾವು ಎಷ್ಟು ಪ್ರವೇಶ ಶುಲ್ಕ ವಿಧಿಸುತ್ತಿದ್ದೀರಿ? ಲಾಲ್‌ಬಾಗ್ ನಿರ್ವಹಣೆಗೆ ಹಣ ತೆಗೆದುಕೊಂಡು ಮಾಡುವುದು ಸರಿಯಾಗಿದೆ. ಬದಲಿಗೆ ಇದರ ನಿರ್ವಹಣೆಯನ್ನು ಬಿಡಿಎನವರು ಮಾಡಲೆಂದು ಸಚಿವರಾದ ತಾವು ಯಾವ ರೀತಿ ಒಪ್ಪಿಗೆ ಕೊಡುತ್ತೀರಿ? ಹಾಗಾದರೆ, ಮಾನ್ಯ ಸದಸ್ಯರಾದ ಸುರೇಶ್‌ಕುಮಾರ್‌ರವರು ಹೇಳಿರುವಂತೆ ನಗರದಲ್ಲಿರುವ ಕಬ್ಬನ್ ಪಾರ್ಕ್ ಇತ್ಯಾದಿಗಳ ನಿರ್ವಹಣೆಯನ್ನೂ ಸಹ ಬಿಡಿಎಗೆ ಕೊಟ್ಟುಬಿಡಿ! ಕಬ್ಬನ್ ಪಾರ್ಕ್ ಮತ್ತು ಲಾಲ್‌ಬಾಗ್ ಅನ್ನು ತೋಟಗಾರಿಕೆ ವ್ಯಾಪ್ತಿಯಲ್ಲೇ ಇಟ್ಟುಕೊಂಡು ಅದರ ಸೌಂದರ್ಯವನ್ನು ಉಳಿಸಿಕೊಳ್ಳಬೇಕು. ಇದು ಪ್ರತಿಷ್ಠಿತ ಲಾಲ್‌ಬಾಗ್ ಆಗಿರುವುದರಿಂದ ಯಾವುದೇ ಕಾರಣಕ್ಕೂ ಬಿಡಿಎಗೆ ಹಸ್ತಾಂತರಗೊಳಿಸದೆ, ಅವರ ಹಸ್ತಕ್ಷೇಪವಿಲ್ಲದಂತೆ ತಾವು ಈ ಸದನದ ಮುಖಾಂತರ ಕ್ಲಾರಿಟಿ ಮತ್ತು ಕ್ಲಿಯರ್ ಆಗಿ ಕ್ಲಾರಿಫೈ ಮಾಡಬೇಕು.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ಲಾಲ್‌ಬಾಗ್ ಮತ್ತು ಕಬ್ಬನ್ ಪಾರ್ಕ್ ಇವುಗಳನ್ನು ಬಹಳ ವರ್ಷಗಳಿಂದ ತೋಟಗಾರಿಕೆ ಇಲಾಖೆಯೇ ನಿರ್ವಹಿಸಿಕೊಂಡು ಬಂದಿದೆ. ಹಿಮಾಚಲ ಪ್ರದೇಶ ಹೊರತುಪಡಿಸಿದರೆ ನಮ್ಮ ರಾಜ್ಯದ ತೋಟಗಾರಿಕೆ ಇಲಾಖೆಗೆ ಇಡೀ ಭಾರತದಲ್ಲೇ ವಿಶೇಷವಾದ ಸ್ಥಾನವಿದೆ. ತೋಟಗಾರಿಕೆಯಲ್ಲಿ ಕರ್ನಾಟಕ ಒಳ್ಳೆಯ ಹೆಸರು ಗಳಿಸಿದ್ದು, ಇದುವರೆವಿಗೂ ಲಾಲ್‌ಬಾಗ್ ಮತ್ತು ಕಬ್ಬನ್ ಪಾರ್ಕ್‌ಗಳನ್ನು ಇಲಾಖೆಯೇ ಚೆನ್ನಾಗಿ ನಿರ್ವಹಿಸಿಕೊಂಡು ಬಂದಿದೆ. ಹದಿನೆಂಟು ವರ್ಷಗಳ ಹಿಂದೆ ನಾನು ತೋಟಗಾರಿಕೆ ಇಲಾಖೆಯ ಮಂತ್ರಿಯಾಗಿದ್ದೆ ಇವುಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಿಕೊಂಡು ಹೋಗುವ ಉದ್ದೇಶವೇನಾದರೂ ತಮಗಿದ್ದರೆ ಅಥವಾ ಇಲಾಖೆಯಿಂದ ನಿರ್ವಹಿಸುವುದು ಬಹಳ ಕಷ್ಟವಾಗುತ್ತಿದೆಯೆಂದರೆ ಮಾನ್ಯ ಸದಸ್ಯರಾದ ಸುರೇಶ್‌ಕುಮಾರ್‌ರವರು ಹೇಳಿದಂತೆ ಇದು ಬಿಡಿಎನವರ ಕೆಲಸವಲ್ಲ. ಹೇಗಿದ್ದರೂ Bangalore, it is a Garden City of India. ಎಂಬ ಪ್ರತೀತಿ ಇದೆ. ಭಾರತದಲ್ಲೇ ಬೆಂಗಳೂರು ಉದ್ಯಾನವನಗಳ ನಗರ ಎಂಬ ಹೆಸರು ಗಳಿಸಿದೆ. ಆದಕಾರಣ, ಎಲ್ಲಾ ಉದ್ಯಾನವನಗಳನ್ನು ಉತ್ತಮವಾಗಿ ನಿರ್ವಹಿಸುವ ಅವಶ್ಯಕತೆಯಿದೆ. ಗಾರ್ಡನ್ ಅಥಾರಿಟಿ ಅಸ್ತಿತ್ವದಲ್ಲಿರುವುದರಿಂದ ಸದರಿ ಅಥಾರಿಟಿಗೆ ಎಲ್ಲಾ ಉದ್ಯಾನವನಗಳನ್ನು ವಹಿಸಿಕೊಟ್ಟು ಎಕ್ಸ್‌ಕ್ಲೂಸಿವ್ ಆಗಿ ಲಾಲ್‌ಬಾಗ್ ಅನ್ನು ಅಭಿವೃದ್ಧಿಪಡಿಸಲು ಅಗತ್ಯವಾಗಿರುವಷ್ಟು ಹಣ ಶೇಖರಿಸುವುದಕ್ಕೆ ಏಕೆ ಅವಕಾಶ ಮಾಡಿಕೊಡಬಾರದು? ಈಗಾಗಲೇ ಎಕ್ಸಿಬಿಷನ್ ಅಥಾರಿಟಿ, ಮೈಸೂರು ಅಂತ ಇದೆ. ಸ್ಪೋರ್ಟ್ ಅಥಾರಿಟಿ ಅಂತ ಇದೆ ಅದೇ ರೀತಿ ಇದನ್ನು ಮಾಡಬೇಕು. ಇದನ್ನು ಬಿಡಿಎಗೆ ಏಕೆ ವಹಿಸಿಕೊಡಬೇಕು? ಇದರ ಬಗ್ಗೆ ತಾವು ಹೇಳಬೇಕು.

ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ಅಧ್ಯಕ್ಷರೆ, ಬಿಡಿಎಗೆ ಪಾರ್ಕ್‌ಗಳನ್ನು ಡೆವಲಪ್ ಮಾಡಲು ವಹಿಸಿಕೊಡುತ್ತಿರುವುದು ಮೊದಲನೆಯ ತಪ್ಪೆಂದು ನನಗನ್ನಿಸುತ್ತಿದೆ. ಏಕೆಂದರೆ, ನನ್ನ ಮತಕ್ಷೇತ್ರದಲ್ಲಿ ಬಿಡಿಎನವರು ಬಡಾವಣೆಗಳನ್ನು ಅಭಿವೃದ್ಧಿಪಡಿಸಿದ್ದು, ಸುಮಾರು 150–200 ಪಾರ್ಕ್‌ಗಳಿವೆ. ಈ ಪೈಕಿ ಒಂದೇ ಒಂದು ಪಾರ್ಕ್ ಅನ್ನು ಬಿಡಿಎನವರು ಅಭಿವೃದ್ಧಿಪಡಿಸಿರುವುದನ್ನು ಎಲ್ಲಿಯಾದರೂ ತೋರಿಸಲಿ? ಅವರಿಗೆ ಸಂಬಂಧಪಟ್ಟ ಪಾರ್ಕ್ ಅನ್ನು ಅವರಿಂದಲೇ ಮೇನ್‌ಟೇನ್ ಮಾಡುವುದಕ್ಕಾಗುತ್ತಿಲ್ಲ. ಬೆಂಗಳೂರು ಸುತ್ತಮುತ್ತ ಬಿಡಿಎ ಲೇಔಟ್‌ಗಳಿವೆ. ಈ ಲೇಔಟ್‌ಗಳಲ್ಲಿರುವ ಪಾರ್ಕ್‌ಗಳನ್ನು ಬಿಡಿಎನವರು ಡೆವಲಪ್ ಮಾಡಿದ್ದಾರೆ ಎಂಬುದನ್ನು ತಿಳಿಸಲಿ. ತಿಳಿಸಿದರೆ ಅದರಲ್ಲಿ ಅವರಿಗೆ ಪರಿಣಿತಿ ಇದೆಯೆ ಇಲ್ಲವೇ ಎಂಬುದು ಗೊತ್ತಾಗುತ್ತದೆ. ಬಿಡಿಎಗೆ ಮತ್ತೊಂದು ಅಭ್ಯಾಸವಿದೆ. ಏನೆಂದರೆ, ಅವರಿಗೆ ಸೈಟುಗಳಿಗೆ ಕಲ್ಲು ಹಾಕಿ ಕಾಸು ಮಾಡುವುದು ಗೊತ್ತಿದೆಯೇ ಹೊರತು ಮರ ಬೆಳೆಸುವುದು ಗೊತ್ತಿಲ್ಲ. ಅವರು ಲೇಔಟ್ ಮಾಡುವ ಕಡೆಗಳಲ್ಲಿ ಮರಗಳಿದ್ದರೆ ಅವೆಲ್ಲವನ್ನೂ ಕಡಿಯುತ್ತಿರುವುದನ್ನು ನಾನು ನೋಡುತ್ತಿದ್ದೇನೆ. ಮರಗಳನ್ನು ಕಡಿಯುತ್ತಿದ್ದಾರೆಯೇ ವಿನಾ ಒಂದೂ ಮರವನ್ನು ಬೆಳೆಸುವಂಥ ಪ್ರಯತ್ನ ಮಾಡುತ್ತಿಲ್ಲ. ಮರ ಕಡಿಯುವವರಿಗೆ ಮರ ಬೆಳೆಸಿ ಎಂದು ಕೆಲಸ ವಹಿಸಿಕೊಟ್ಟರೆ ಅವರಿಗೆ ಅದರಲ್ಲಿ ಏನು ಪರಿಣಿತಿ ಇದೆ? ಅಗ್ರಿಕಲ್ಚರ್ ಮತ್ತು ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಎಂ.ಎಸ್ಸಿ. ಮಾಡಿರುವ ಎಷ್ಟು ಪರಿಣಿತರು ಅಲ್ಲಿ ಕೆಲಸ ಮಾಡುತ್ತಿದ್ದಾರೆ? ಯಾರೂ ಇಲ್ಲ. ಎಲ್ಲರೂ ಟೇಪ್ ಹಿಡಿಯುವವರು ! ಅವರಿಗೆ ಟೇಪ್ ಹಿಡಿದು ಮೆಶರ್‌ಮೆಂಟ್ ತೆಗೆದುಕೊಂಡು ಬಿಲ್ ಮಾಡುವುದಷ್ಟೇ ಗೊತ್ತಿದೆ. ಅವರಿಗೆ ಇದನ್ನು ವಹಿಸಿಕೊಡುವುದರಿಂದ

ಬಹಳ ಅನ್ಯಾಯವಾಗತ್ತದಲ್ಲದೆ ಆ ಡಿಪಾರ್ಟ್‌ಮೆಂಟಿಗೆ ಕಳಂಕ ಬರುತ್ತದೆ. ಮುಂದೆ ಎಲ್ಲಾ ಡಿಪಾರ್ಟ್‌ಮೆಂಟ್‌ಗಳನ್ನೂ ಮುಚ್ಚಿ ಬಿಡಿಎ ಒಂದೇ ಕರ್ನಾಟಕದಲ್ಲಿ ಉಳಿಯುವಂಥ ಸ್ಥಿತಿ ಬರುತ್ತದೆ. ದಯವಿಟ್ಟು ಹಾಗಾಗುವುದು ಬೇಡ. ಯಾವ್ಯಾವ ಡಿಪಾರ್ಟ್‌ಮೆಂಟ್‌ಗೆ ಏನೇನು ಅಧಿಕಾರಗಳಿವೆಯೋ, ಆ ಅಧಿಕಾರಗಳನ್ನು ಆಯಾ ಡಿಪಾರ್ಟ್‌ಮೆಂಟ್ ಅಧಿಕಾರಿಗಳೇ ಚಲಾಯಿಸಬೇಕೆಂದು ನನ್ನ ಆಗ್ರಹವಾಗಿದೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಲಾಲ್‌ಬಾಗ್‌ಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಅನೇಕ ಸಾರ್ವಜನಿಕರು ಅಲ್ಲಿಗೆ ಬಂದು ಲಾಲ್‌ಬಾಗ್ ಅನ್ನು ಯಾವ ರೀತಿ ಇಂಪ್ರೂವ್ ಮಾಡಬೇಕೆಂಬ ಬಗ್ಗೆ ತಮ್ಮ ಸಲಹೆಗಳನ್ನು ಕೊಟ್ಟಿರುತ್ತಾರೆ. ಆ ಸಲಹೆಗಳನ್ನು ಪರಿಶೀಲಿಸುವುದಾಗಿ ಸಹ ಅವರು ತಿಳಿಸಿರುತ್ತಾರೆ. ಜೊತೆಗೆ ಕೆಲವರು ಸ್ಪಾನ್ಸರ್ಸ್ ಸಹ ಬಂದಿದ್ದು, ಲಾಲ್‌ಬಾಗ್‌ನ ಕೆಲವು ಭಾಗಗಳನ್ನು ಅಭಿವೃದ್ಧಿಪಡಿಸುವುದಾಗಿ ತಿಳಿಸಿದ್ದರು. ಇದನ್ನು ಬಿಟ್ಟು ಬಿಡಿಎಗೆ ವಹಿಸಿಕೊಟ್ಟು, ಅವರ ಮುಖಾಂತರ ಲಾಲ್‌ಬಾಗ್ ಅನ್ನು ಉದ್ಧಾರ ಮಾಡಬೇಕೆಂದು ಹೇಳುತ್ತಿರುವುದು ಸರಿಯಿಲ್ಲ. ಎರಡನೆಯದಾಗಿ, ಲಾಲ್‌ಬಾಗ್ ಕೆರೆಗೆ ದಕ್ಷಿಣ ಭಾಗದಿಂದ ಸಿವರೇಜ್ ವಾಟರ್ ಬಂದು ನೀರು ಕಲುಷಿತಗೊಳ್ಳುತ್ತಿರುವ ಬಗ್ಗೆ ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೆ. ನ್ಯಾಯಾಲಯದಲ್ಲಿ ಒಂದು ರಿಟ್ ಪಿಟಿಶನ್ ಸಹ ಹಾಕಲಾಗಿದೆ. ಸದರಿ ರಿಟ್ ಪಿಟಿಶನ್ ಈಗಲೂ ಪೆಂಡಿಂಗ್ ಇದೆ. ಲಾಲ್‌ಬಾಗ್‌ಗೆ ದಿನನಿತ್ಯವೂ ಸಾವಿರಾರು ಸಂಖ್ಯೆಯಲ್ಲಿ ನಾಗರಿಕರು ಆಗಮಿಸುವುದರಿಂದ ಕೆರೆಗೆ ಬರುತ್ತಿರುವ ಕಲುಷಿತ ನೀರನ್ನು ತಡೆಗಟ್ಟಬೇಕಾಗಿದೆ. ಸದರನ್ ಪೋರ್ಶನ್‌ನಲ್ಲಿ ಒಂದು ವಾಲ್ ಅನ್ನು ಕಟ್ ಮಾಡಿದ್ದಾರೆ. ಆ ಕಾಮಗಾರಿ ಆರು ತಿಂಗಳಾದರೂ ಇದುವರೆವಿಗೂ ಪೂರ್ತಿಗೊಂಡಿಲ್ಲ. ಅಲ್ಲಿದ್ದ Deer Park ಸಹ ತೆಗೆದುಹಾಕಿದ್ದಾರೆ. ಅಲ್ಲಿ ಯಾವ ರೀತಿಯ ಅಭಿವೃದ್ಧಿ ಮಾಡಿದ್ದಾರೆ? ಪ್ರವೇಶ ಶುಲ್ಕದಿಂದ ಸುಮಾರು 132 ಲಕ್ಷ ರೂಪಾಯಿ ಸಂಗ್ರಹವಾಗಿದೆ. ಎರಡು ರೂಪಾಯಿ ಇದ್ದ ಪ್ರವೇಶ ಶುಲ್ಕವನ್ನು ಐದು ರೂಪಾಯಿಗಳಿಗೆ ಹೆಚ್ಚಿಸಿದ್ದಾರೆ. ಟೂರಿಸ್ಟ್‌ಗಳಿಗೆ ಐದು ರೂಪಾಯಿ ಪ್ರವೇಶ ಶುಲ್ಕ ವಿಧಿಸಿದ್ದಾರೆ. ಲಾಲ್‌ಬಾಗ್ ಅನ್ನು ಹೇಗೆ ಅಭಿವೃದ್ಧಿಪಡಿದಬೇಕೆಂಬ ಬಗ್ಗೆ ಮಾಸ್ಟರ್ ಪ್ಲಾನ್ ತಯಾರಿಸಿದ್ದಾರೆಯೇ? ಏನೂ ಇಲ್ಲ. ಮಾನ್ಯ ಮುಖ್ಯಮಂತ್ರಿಯವರು ಬಿಡಿಎ ಅವರನ್ನು ಕರೆದುಕೊಂಡು ಹೋದರು, ಗ್ಲಾಸ್ ಹೌಸ್ ವೀಕ್ಷಿಸಿದರು, ಅದನ್ನು ಬದಲಾವಣೆ ಮಾಡಬೇಕೆಂದು ಹೇಳಿದರೇ ವಿನ ಮಾನ್ಯ ಸದಸ್ಯರಾದ ಅಶೋಕ್‌ರವರು ಹೇಳಿರುವಂತೆ ಬೆಂಗಳೂರು ಸುತ್ತಮುತ್ತಲೂ ಬಿಡಿಎಗೆ ಸಂಬಂಧಿಸಿದಂತೆ ಸಾಕಷ್ಟು ಉದ್ಯಾನವನಗಳಿರುವುದರಿಂದ ಅವುಗಳನ್ನು ಅಭಿವೃದ್ಧಿಪಡಿಸುವತ್ತ ಬಿಡಿಎನವರು ಗಮನಹರಿಸಲಿ. ಲಾಲ್‌ಬಾಗ್ ನಿರ್ವಹಣೆಯನ್ನು ಅವರಿಗೇಕೆ ವಹಿಸಿಕೊಡುತ್ತೀರಿ?

ಅಧ್ಯಕ್ಷರು : ತಾವು ಹೇಳಿರುವುದು ಮಾನ್ಯ ಸಚಿವರಿಗೆ ಅರ್ಥವಾಗಿದೆ. ಅವರು ಉತ್ತರಿಸುತ್ತಾರೆ.

ಶ್ರೀ ಎಂ. ಶಿವಣ್ಣ : ಮಾನ್ಯ ಸದಸ್ಯರಾದ ಸುರೇಶ್‌ಕುಮಾರ್‌ರವರು ಕೇಳಿರುವ ಪ್ರಶ್ನೆಗೆ ಸ್ಪಷ್ಟವಾಗಿ ಉತ್ತರದಲ್ಲಿ ಹೇಳಿದ್ದೇನೆ. ಬೆಂಗಳೂರಿನ ಸುಪ್ರಸಿದ್ಧ ಲಾಲ್‌ಬಾಗ್ ಉದ್ಯಾನವನ ಈಗ ಯಾವ ಇಲಾಖೆಯ ಉಸ್ತುವಾರಿಯಲ್ಲಿದೆ ಎಂದು ಕೇಳಿರುವುದಕ್ಕೆ ತೋಟಗಾರಿಕೆ ಇಲಾಖೆಯ ಉಸ್ತುವಾರಿಯಲ್ಲಿದೆಯೆಂದು ಸ್ಪಷ್ಟವಾಗಿ ಉತ್ತರಿಸಿದ್ದು, ಅದೇ ರೀತಿ ಈ ಉದ್ಯಾನವನದ ಉಸ್ತುವಾರಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಕೊಡಲು ಸರ್ಕಾರ ನಿಶ್ಚಯಿಸಿದೆಯೇ

ಎಂದಿರುವುದಕ್ಕೆ ಇಲ್ಲವೆಂದು ಸ್ಪಷ್ಟವಾಗಿ ಹೇಳಿದ್ದೇನೆ. ಇಷ್ಟೆಲ್ಲಾ ಹೇಳಿರುವಾಗ ಮಾನ್ಯ ಸದಸ್ಯರಾದ ಬಚ್ಚೇಗೌಡರು ಒಂದು ವಿಷಯವನ್ನು ಪ್ರಸ್ತಾಪಿಸಿದರು. ಲಾಲ್‌ಬಾಗ್‌ಗೆ ದಿನನಿತ್ಯ ವಾಕಿಂಗ್‌ಗೆ ಬರುವ ನಾಗರಿಕರಿಂದ ಎಷ್ಟು ಪ್ರವೇಶ ಶುಲ್ಕ ವಿಧಿಸಿ ಸಂಗ್ರಹಿಸಲಾಗಿದೆಯೆಂದು ಕೇಳಿರುವುದಕ್ಕೆ ಅವರಿಗೆ ಯಾವುದೇ ರೀತಿಯಾದ ಪ್ರವೇಶ ಶುಲ್ಕ ವಿಧಿಸುತ್ತಿಲ್ಲ. ದಿನನಿತ್ಯವೂ ಸುಮಾರು ಐದು ಸಾವಿರ ನಾಗರಿಕರು ವಾಕಿಂಗ್ ಮಾಡಲು ಲಾಲ್‌ಬಾಗ್‌ಗೆ ಬಂದರೂ ಯಾವುದೇ ಶುಲ್ಕ ವಿಧಿಸುತ್ತಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಮೊದಲು ಪ್ರವೇಶ ಶುಲ್ಕ ವಿಧಿಸಲಾಗಿತ್ತು. ನಂತರ ವಾಪಸ್ಸು ತೆಗೆದುಕೊಳ್ಳಲಾಯಿತು.

ಶ್ರೀ ಎಂ. ಶಿವಣ್ಣ : ಲಾಲ್ ಬಾಗ್‌ಗೆ ಪ್ರವಾಸಿಗರು ಬರುವುದರಿಂದ ಅವರಿಗೆ ಹೆಚ್ಚಿನ ಸೌಲಭ್ಯ ಒದಗಿಸಿಕೊಡುವ ದೃಷ್ಟಿಯಿಂದ ಎರಡು ರೂಪಾಯಿ ಇದ್ದ ಪ್ರವೇಶ ಶುಲ್ಕವನ್ನು ಐದು ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಈ ರೀತಿ ಸಂಗ್ರಹಿಸಿದ ಹಣವನ್ನು ಲಾಲ್‌ಬಾಗ್ ಅಭಿವೃದ್ಧಿಗೆ ಬಳಕೆ ಮಾಡಲಾಗುವುದು. ಇಷ್ಟೆಲ್ಲಾ ಬಳಕೆ ಮಾಡಿಯೂ ಕಳೆದ ಮೂರು ವರ್ಷಗಳಲ್ಲಿ ಸುಮಾರು 175 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಕಳೆದ ವರ್ಷ 2002--03ರಲ್ಲಿ 88 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಪ್ರವೇಶ ಶುಲ್ಕದಿಂದ 88 ಲಕ್ಷ ರೂಪಾಯಿ ಸಂಗ್ರಹವಾಗಿದೆ. ಇಷ್ಟೆಲ್ಲಾ ಸಂಪನ್ಮೂಲ ಸಂಗ್ರಹವಾದರೂ ಕೂಡ ಅದನ್ನು ಲಾಲ್‌ಬಾಗ್‌ನ ಅಭಿವೃದ್ಧಿಗೆ ತೊಡಗಿಸಿದರೂ ಸಾಕಾಗುವುದಿಲ್ಲ. ಲಾಲ್‌ಬಾಗ್‌ಗೆ ಪ್ರತಿನಿತ್ಯವೂ ವಾಕಿಂಗ್ ಮಾಡಲು ಬರುವವರಿರಬಹುದು. ಪ್ರವಾಸಿಗರಿರಬಹುದು, ಬೆಂಗಳೂರಿನ ಯಾವುದೇ ಜನತೆ ಇರಬಹುದು, ಜನಪ್ರತಿನಿಧಿಗಳಿರಬಹುದು, ಲಾಲ್‌ಬಾಗ್ ಏಕೆ ಇನ್ನೂ ಅಭಿವೃದ್ಧಿಯಾಗಿಲ್ಲವೆನ್ನುವ ಚಿಂತೆ ಎಲ್ಲರಿಗೂ ಇದೆ. ಇದನ್ನು ಅಭಿವೃದ್ಧಿಪಡಿಸಬೇಕೆನ್ನುವಾಗ ಸಾಕಷ್ಟು ಹಣಕಾಸಿನ ಸಂಪನ್ಮೂಲ ಇಲ್ಲವೆನ್ನುವ ಬಗ್ಗೆಯೂ ಯೋಚನೆ ಮಾಡಿದ್ದೇವೆ. ಖಾಸಗಿಯವರ ಸಹಭಾಗಿತ್ವದಲ್ಲಿ ಏನಾದರೂ ಮಾಡೋಣವೆಂದರೆ ಸಂಸ್ಥೆಯ ಬೋರ್ಡ್ ಹಾಕಿಕೊಳ್ಳುವುದಕ್ಕೆ ಅವರಿಗೆ ಅವಕಾಶ ಕೊಡಬೇಕಾಗುತ್ತದೆ. ಅದರ ಸೌಂದರ್ಯ ಕೆಡತಕ್ಕದ್ದೂ ಕೂಡ ಆಗುತ್ತದೆ. ಮಾನ್ಯ ಸುಬ್ಬಾರೆಡ್ಡಿಯವರು ಹೇಳಿದಂತೆ ನಾವು ಒಂದು ಲಕ್ಷ ರೂ. ಕೊಡುತ್ತೇವೆ. ಎರಡು ಲಕ್ಷ ರೂ. ಕೊಡುತ್ತೇವೆ ಎಂದು ಕೆಲವರು ಮುಂದೆ ಬರಿದರು, ನಮ್ಮ ಮಕ್ಕಳು ಇಲ್ಲಿ ಓಡಾಡಿಕೊಂಡು ಇವತ್ತು ಫಾರಿನ್‌ನಲ್ಲಿದ್ದಾರೆ, ಅವರೆಲ್ಲಾ ಕೊಡುತ್ತೇವೆಂಬ ಅಭಿಪ್ರಾಯ ಕೊಟ್ಟಿದ್ದಾರೆ, ಮಾಡಬಹುದು ಎಂದು ಮಾನ್ಯ ಸುಬ್ಬಾರೆಡ್ಡಿಯವರು ಹೇಳಿದರು. ಇಷ್ಟೆಲ್ಲಾ ಸಂಪನ್ಮೂಲವನ್ನು ಭಾರಿ ಶ್ರಮವಹಿಸಿ ಸಂಗ್ರಹಣೆ ಮಾಡಿ ಇದನ್ನು ಅಭಿವೃದ್ಧಿಪಡಿಸಬೇಕು. ಆದರೆ ಸರ್ಕಾರ ಸ್ವಾಮ್ಯದಲ್ಲಿರುವ ಬಿ.ಡಿ.ಎ. ಸಾಕಷ್ಟು ಸಂಪನ್ಮೂಲವನ್ನು ಹೊಂದಿರುವಾಗ ಮಾನ್ಯ ಮುಖ್ಯಮಂತ್ರಿಗಳು ತೀರ್ಮಾನ ಮಾಡಿ ಇದನ್ನು ಅಭಿವೃದ್ಧಿಪಡಿಸಬೇಕೆಂದು ಚಿಂತನೆ ಮಾಡುವಾಗ ಅದನ್ನು ನಾವು ಅಭಿವೃದ್ಧಿಪಡಿಸಲು ತೋಟಗಾರಿಕೆ ಇಲಾಖೆಯಲ್ಲಿ ಅವಕಾಶವನ್ನು ಮಾಡಿಕೊಟ್ಟು ಅಭಿವೃದ್ಧಿಪಡಿಸಿ ಅದರ ನಿರ್ವಾಹಣೆಯನ್ನು, ಅವರೇನು ಜೂನ್ 30ಕ್ಕೆ ಸಂಪೂರ್ಣವಾಗಿ ಅಭಿವೃದ್ಧಿ ಕಾರ್ಯವನ್ನು ಮುಗಿಸುತ್ತೇವೆಂದು ಹೇಳಿದಮೇಲೆ, ಆ ಕೆಲಸವನ್ನು ಮುಗಿಸಿಕೊಟ್ಟ ಮೇಲೆ ಇಲಾಖೆಯ ಜವಾಬ್ದಾರಿಯಲ್ಲಿ ಅದರ ನಿರ್ವಾಹಣೆಯ ಕೆಲಸವಾಗುತ್ತದೆ. ಆ ದೃಷ್ಟಿಯಿಂದ ಸಂಪನ್ಮೂಲವನ್ನು ಬಿ.ಡಿ.ಎ. ನವರು ತೊಡಗಿಸುತ್ತೇವೆಂದು ಹೇಳುವಾಗ, ಬೇರೆಯವರಿಗೆ ಕೊಟ್ಟುಬಿಟ್ಟಿದ್ದಾರೆ ಎನ್ನತಕ್ಕ ಅನುಮಾನ, ಚಿಂತನೆ ಬಹುಶಃ ಬೇಕಾಗಿಲ್ಲ.

ಅಧ್ಯಕ್ಷರು : ಮಾನ್ಯ ಸುಬ್ಬಾರೆಡ್ಡಿಯವರು ಮಾಡಿದ ಸಿವಿರೇಜ್ ವಿಚಾರದ ಬಗ್ಗೆ ಹೇಳಿ.

ಶ್ರೀ ಎಂ. ಶಿವಣ್ಣ : ಹಣಕಾಸನ್ನು ಅವರು ಕೊಡತಕ್ಕವರಾಗಿದ್ದಾರೆ. ಎಲ್ಲಾ ಅಭಿವೃದ್ಧಿಗಳೂ ಆಗುತ್ತದೆ, ಬೆಂಗಳೂರು ನಗರಕ್ಕೆ ಕಳಸಪ್ರಾಯವಾಗಿ ಆಗತಕ್ಕದ್ದು ಆಗುತ್ತದೆ. ಮಾನ್ಯ ಸುಬ್ಬಾರೆಡ್ಡಿಯವರು ಹೇಳಿದಂತೆ, ಸಿವಿರೇಜ್ ವಾಟರ್‌ನ್ನು ಡೈವರ್ಟ್ ಮಾಡಲು ಈಗಾಗಲೇ 67 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಾಮಗಾರಿಯನ್ನು ತೆಗೆದುಕೊಂಡು ಪೂರ್ಣವಾಗುವ ಮಟ್ಟಕ್ಕೆ ಬಂದಿದೆ. ಅದು ಅನುಕೂಲವಾಗಿದೆ. ನಾನೂ ಇತ್ತೀಚೆಗೆ ಅಲ್ಲಿಗೆ ಎರಡು ಮೂರು ಬಾರಿ ಭೇಟಿ ಕೊಟ್ಟ ಸಂದರ್ಭದಲ್ಲಿ ಜನಾಭಿಪ್ರಾಯ ಬಂದದ್ದು, ಹಿಂದಿನ ದಿನಗಳಿಗೆ ಹೋಲಿಕೆ ಮಾಡಿದರೆ ಈಗ ಕ್ರಮೇಣವಾಗಿ ಲಾಲ್‌ಬಾಗ್ ಅಭಿವೃದ್ಧಿಯಾಗುತ್ತಿದೆ ಎಂದು ಸಾರ್ವಜನಿಕರು ಹೇಳಿದ್ದಾರೆ, ಈ ಹಿಂದೆ ಸ್ವತಃ ಸುಬ್ಬಾರೆಡ್ಡಿಯವರೇ ಹೇಳಿದ್ದಾರೆ. ಲಾಲ್‌ಬಾಗ್ ಮತ್ತು ಕಬ್ಬನ್ ಪಾರ್ಕ್ ಎರಡೂ ಕೂಡ ಅಷ್ಟೆ. ಆದ್ದರಿಂದ ಇದರ ಅಭಿವೃದ್ಧಿಗೆ ಏನು ಮಾಡಿದೆ ಇದನ್ನು ತಮಗೆ ಯಾವುದೇ ಅನುಮಾನ ಬಾರದಿಯವ ರೀತಿಯಲ್ಲಿ ಇಲಾಖೆಯ ವ್ಯಾಪ್ತಿಯಲ್ಲಿಟ್ಟುಕೊಂಡು ಅಭಿವೃದ್ಧಿ ಪಡಿಸತಕ್ಕ ಕೆಲಸವಾಗುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಮಾನ್ಯ ಶಂಕರಲಿಂಗೇಗೌಡರು.

ಶ್ರೀ ಎಸ್. ಶಿವಾನಂದಪಾಟೀಲ್ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಯೇನಾಯಿತು?

ಅಧ್ಯಕ್ಷರು : ಅದಕ್ಕೆ ಇನ್ನೂ ಉತ್ತರ ಬಂದಿಲ್ಲ.

ಶ್ರೀ ಎಸ್. ಶಿವಾನಂದಪಾಟೀಲ್ : ಯಾವಾಗ ಬರುತ್ತದೆ ಅಧ್ಯಕ್ಷರೆ?

ಅಧ್ಯಕ್ಷರು : ಯಾವಾಗ ಎಂದು ಹೇಳಲು ಆಗುವುದಿಲ್ಲ.

ಶ್ರೀ ಎಸ್. ಶಿವಾನಂದಪಾಟೀಲ್ : ಇದೇ ಪ್ರಶ್ನೆ ಲಾಸ್ಟ್ ಟೈಮ್ ಸೆಷನ್ ನಲ್ಲಿ ಮಾರ್ಚ್‌ನಲ್ಲಿ ಇತ್ತು.

ಅಧ್ಯಕ್ಷರು : ಉತ್ತರ ಬರಲಿ, ನಾವು ಇದನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಉತ್ತರ ಬಂದಾಗ ಹಾಕುತ್ತೇವೆ. ತಾವು ದಯವಿಟ್ಟು ನಮ್ಮ ಕಛೇರಿಗೆ ಬನ್ನಿ.

ಶ್ರೀ ಎಸ್. ಶಿವಾನಂದಪಾಟೀಲ್ : ತಮ್ಮ ಕಛೇರಿಗೆ ಬರಬೇಕಾಗಿದ್ದರೆ ನಾನು ಇಲ್ಲಿ ಏಕೆ ಬರಬೇಕು? ನಾನು ಅಲ್ಲೇ ಬಂದು ಕುಳಿತುಬಿಡುತ್ತೇನೆ.

ಅಧ್ಯಕ್ಷರು : ಈ ರೀತಿ ಪ್ರತಿಯೊಬ್ಬರೂ ಎದ್ದು ನಿಂತುಕೊಂಡು ನಮ್ಮ ಪ್ರಶ್ನೆ ಏನಾಯಿತು ಎಂದರೆ, ನಾನು ಇಲ್ಲಿ ನೂರು ಜನರಿಗೆ ಉತ್ತರವನ್ನು ಕೊಡಬೇಕು. ದಯವಿಟ್ಟು ನನ್ನ ಕಛೇರಿಗೆ ಬನ್ನಿ.

ಶ್ರೀ ಎಸ್. ಶಿವಾನಂದಪಾಟೀಲ್ : ನಾನು ಸುಮ್ಮನೆ ಎದ್ದು ನಿಲ್ಲುವುದಿಲ್ಲ, ಇದೇ ಪ್ರಶ್ನೆ ಲಾಸ್ಟ್ ಟೈಮ್ ಮಾರ್ಚ್‌ನಲ್ಲಿ ಬಂದಿದ್ದು ಇನ್ನೂ ಉತ್ತರ ಬಂದಿಲ್ಲವೆಂದರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ : ಹೋದ ಸಲ ಈ ಪ್ರಶ್ನೆ ಬಂದಿದೆ, ಇನ್ನೂ ಉತ್ತರ ಬಂದಿಲ್ಲ.

ಅಧ್ಯಕ್ಷರು : ಅದನ್ನೇ ಮಾತನಾಡಲು ನನ್ನ ಕಛೇರಿಗೆ ಬನ್ನಿ. ಉತ್ತರ ಬಂದಿಲ್ಲವೆಂದು ಈಗ ನನ್ನ ಗಮನಕ್ಕೆ ತರುತ್ತಿದ್ದಾರೆ. ಸಂಬಂಧಪಟ್ಟವರಿಗೆ ದೂರವಾಣಿಯ ಮೂಲಕ ಮಾತನಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇವತ್ತು 15 ಪ್ರಶ್ನೆಗಳಿದೆ, ಅದರಲ್ಲಿ ಕೇವಲ 6ಕ್ಕೆ ಉತ್ತರ ಬಂದಿದೆಯೆಂದರೆ ಹೇಗೆ? ಇವರು ಹೈಟೆಕ್ ಸರ್ಕಾರವೆಂದು ಹೇಳುತ್ತಾರೆ, ಹೀಗಾದರೆ